ರಿಯಾ ಖಾಯಿಲೆ ಹೆಚ್ಚಾಗಿದೆ ಎಂದು ಕಂಡುಬಂದ ಪಕ್ಷದಲ್ಲಿ ಅದಕ್ಕೆ ಸಂಬಂಧಪಟ್ಟ ಅಧಿಕಾರಿಗಳು ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳುತ್ತಾರೆ.

ಶ್ರೀ ಬಿ. ಎಚ್. ರಾಮೇಗೌಡ.—ಮಲೇರಿಯಾ ಸೋಂಕು ಪ್ರತಿಯೊಂದು ಹಳ್ಳಿಯಲ್ಲಿಯೂ ಜಾಸ್ತಿ ಯಾಗಿರುವುದರಿಂದ ಈಗಲಾದರೂ ಡಿ.ಡಿ.ಟಿ. ಸ್ಪ್ರೇ ಮಾಡಿಸುವುದಕ್ಕೆ ಏರ್ಪಾಡು ಮಾಡುತ್ತೀರಾ? ಆ ಗ್ರಾಮಗಳಲ್ಲಿ ಒಂದುಸಲ ಸ್ಪ್ರೇ ಮಾಡಿ, ಇನ್ನೊಂದು ಸಲ ಸ್ಪ್ರೇ ಮಾಡದೆ ಇರುವುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಟಿ. ಚನ್ನಯ್ಯ.—ಒಂದುಸಲ ಸ್ಪ್ರೇ ಮಾಡಿರುವಾಗ ಪುನಃ ಸ್ಪ್ರೇ ಮಾಡಬೇಕೆಂದಿಲ್ಲ.

ಶ್ರೀ ಸಿ. ಟಿ. ಹನುಮಂತಯ್ಯ.—ಡಿ.ಡಿ.ಟಿ. ಸ್ಪ್ರೇ ಮಾಡಿಸಬೇಕು ಎಂದು ಈ ಗ್ರಾಮಗಳವರು ಮನವಿ ಮಾಡಿಕೊಂಡಿರುವುದು ಗೊತ್ತಿದೆಯೆ?

ಶ್ರೀ ಟಿ. ಚನ್ನಯ್ಯ.—ಅನೇಕ ಮೈದಾನ ಪ್ರದೇಶ ಗಳಿಂದಲೂ ಕೂಡ ಜನಗಳು ಆಗಾಗ್ಗೆ ಡಿ.ಡಿ.ಟಿ. ಸ್ಪ್ರೇ ಮಾಡಿಸಬೇಕೆಂದು ಅರ್ಜಿಗಳನ್ನು ಸರ್ಕಾರಕ್ಕೂ ಮತ್ತು ಇಲಾಖೆಗೂ ಕಳುಹಿಸುತ್ತಿದ್ದಾರೆ. ಮಲೇರಿಯಾ ಹಾವಳಿ ಹೆಚ್ಚಾಗಿದೆ ಎಂದು ಕಂಡುಬಂದ ಸ್ಥಳಗಳಲ್ಲಿ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳುತ್ತಿದ್ದಾರೆ.

ಶ್ರೀ ವಿ. ಆರ್. ನಾಯ್ಡು.—ಡಿ.ಡಿ.ಟಿ. ಸ್ಪ್ರೇ ಮಾಡಿದರೆ ಹುಳುಗಳು, ಸೊಳ್ಳೆಗಳು ಸಾಯುತ್ತವೆ ಎನ್ನುವುದು ತಮ್ಮ ಅಭಿಪ್ರಾಯವೇ?

ಅಧ್ಯಕ್ಷರು.—ಹೌದು.

ಶ್ರೀ ವಿ. ಆರ್. ನಾಯ್ಡು.—ನನ್ನ ಸಚಿವರು ಹೇಳಿದ್ದರೆ ಚೆನ್ನಾಗಿತ್ತು. ಆರೋಗ್ಯ ಇಲಾಖೆಯವರು ಡಿ.ಡಿ.ಟಿ. ಸ್ಪ್ರೇ ಮಾಡಿದರೆ ಸೊಳ್ಳೆಗಳು ಸಾಯುತ್ತವೆ; ಮಲೇರಿಯಾ ಬರುವುದಿಲ್ಲವೆಂದು ಹೇಳುತ್ತಾರೆ. ಆದರೆ ಡಿ.ಡಿ.ಟಿ. ಪ್ರಯೋಗ ಮಾಡಿದ ತಕ್ಷಣ ಸೊಳ್ಳೆಗಳು ಅದನ್ನು ತಿಂದು ಆರೋಗ್ಯವಾಗಿರುತ್ತವೆ. ಸೊಳ್ಳೆ ಗಳು ಸಾಯುವುದೇ ಇಲ್ಲ . . .

ಅಧ್ಯಕ್ಷರು.—ತಾವು ತಮ್ಮ ಅಭಿಪ್ರಾಯವನ್ನು ಬೇರೆ ಕಾಲದಲ್ಲಿ ಹೇಳಬಹುದು. ಈಗ ಪ್ರಶ್ನೆಗಳ ಕಾಲ.

ಶ್ರೀ ಶಿವನಂಜೇಗೌಡ.—ಹಿಂದೆ ಡಿ.ಡಿ.ಟಿ. ಸ್ಪ್ರೇ ಮಾಡಿದರೆ ಸೊಳ್ಳೆಗಳು, ನೊಣಗಳು ಸಾಯುತ್ತಿದ್ದುವು. ಈಗ ಡಿ.ಡಿ.ಟಿ. ಸ್ಪ್ರೇ ಮಾಡಿದರೆ ಮೂರು ದಿವಸಗಳ ಲ್ಲಿಯೇ ಸೊಳ್ಳೆ, ನೊಣ ಮುಂತಾದುವು ಬರುತ್ತವೆ. ಈಗಿನ ಡಿ.ಡಿ.ಟಿ.ಯಿಂದ ಪ್ರಯೋಜನವಿಲ್ಲವಾದ್ದರಿಂದ ತಾವು ಏನಾದರೂ ಕಾರ್ಯಕ್ರಮ ತೆಗೆದುಕೊಂಡು ಒಳ್ಳೆಯ ಡಿ.ಡಿ.ಟಿ. ಪ್ರಯೋಗ ಮಾಡುವುದಕ್ಕೆ ಏರ್ಪಾಡು ಮಾಡುತ್ತೀರಾ?

ಶ್ರೀ ಟಿ. ಚನ್ನಯ್ಯ ಈಗ ಡಿ.ಡಿ.ಟಿ. ಸ್ಪ್ರೇ ಮಾಡಿರುತಕ ಸ್ಥಳಗಳಲ್ಲಿ ಅದರ effect ಸರಿಯಾಗಿಲ್ಲ, ಸೊಳ್ಳೆಗಳು ಸಾಯುತ್ತಿಲ್ಲವೆಂದು ತಾವು ಹೇಳುವು ದಾದರೆ, concentration ಜಾಸ್ತಿ ಮಾಡಿ ಸೊಳ್ಳೆಗಳು ಸಾಯುವಂತೆ ಮಾಡಲು ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳಬೇಕು ಎಂದು ಇಲಾಖೆಯವರಿಗೆ ಸೂಚನೆ ಕೊಡುತ್ತೇನೆ.

ಶ್ರೀ ಶಿವನಂಜೇಗೌಡ.—ಡಿ.ಡಿ.ಟಿ. ಪ್ರಯೋಗ ವನ್ನು ಈಗ ಎಲ್ಲೆಲ್ಲಿ ಮಾಡಿಸಿದೆಯೋ ಅಲ್ಲೆಲ್ಲಾ ಮಲೇರಿಯಾ ಹಾವಳಿ ಕಡಮೆ ಆಗಿದೆಯು ಎಂಬುದನ್ನು ಸರ್ವೆ ಮಾಡಿಸಿ ನೋಡಿದ್ದಿರಾ?

ಶ್ರೀ ಟಿ. ಚನ್ನಯ್ಯ.—ಬಹಳ ಅನುಕೂಲವಾಗಿದೆ ಯೆಂದು ತಿಳಿದುಬಂದಿದೆ.

Sri K. PUTTASWAMY.—Has it come to the notice of the Government that a sort of immunity has developed in mosquitoes against D.D.T. ?

Sri T. CHANNIAH.—Not in all cases; but in few cases it is so.

Sri K. PUTTASWAMY.—May I know what those few cases are ?

Sri T. CHANNIAH.—I cannot say offhand now.

Sri K. PUTTASWAMY.—May I know at least any one case ?

Sri K. HANUMANTHAIYA.—It is not possible to trace these mosquitoes, Sir. (*Laughter*).

Mr. SPEAKER.—Government might have received reports from some places; notin some cases. (*Laughter*).

Sri K. PUTTASWAMY.—That may be a fact. May I know the steps that Government have taken to get this examined ?

Sri K. HANUMANTHAIYA.—The Hon'ble Member has got in mind what may be called the scientific discovery that after some time the D.D.T. spraying will have no effect. But, that is still a long way off and I do not suppose that D.D.T. has proved to be ineffective. If and when D.D.T. becomes ineffective, the scientists and the concerned department will do the needful.

Municipal Councils (Reconstitution).

Q.—388. Sri S. GOPALA GOWDA (Sagar-Hosanager).—

Will the Government be pleased to state :—

(*a*) the steps taken for reconstituting the municipal councils in the State;

(*b*) whether it has come to their notice that in several municipalities serious lapses in keeping up calendar of events have happened;

(*c*) whether it is a fact that electoral rolls and other forms are not supplied in time;

(*d*) whether Government have taken steps to conduct the elections in a free and fair manner ?

A.—Sri T. CHANNIAH (Minister for Public Health and Local Self-Government).—

(*a*) Necessary action in accordance with the Mysore Town Municipalities Act and the Election Rules framed thereunder has been taken for holding the elections.

(*b*) No.

(*c*) No.

(*d*) Yes.

ಶ್ರೀ ಎಸ್. ಗೋಪಾಲಗೌಡ.—ಕ್ಯಾಲೆಂಡರ್ ಆಫ್ ಈವೆಂಟ್ಸ್ ಸರಿಯಾಗಿ ಫಾಲೋ ಮಾಡಿಲ್ಲವೆಂದು ಯಾವುದಾದರೂ ಮುನಿಸಿಪಲ್ ಕ್ಷೇತ್ರಗಳಿಂದ ಸರ್ಕಾರಕ್ಕೆ ದೂರು ಬಂದಿದೆಯೇ ?

ಶ್ರೀ ಟಿ. ಚನ್ನಯ್ಯ.—ಬಂದಿಲ್ಲ.

ಶ್ರೀ ಎಸ್. ಗೋಪಾಲಗೌಡ.—ನಕಾಲದಲ್ಲಿ ಎರಿಕ್ಟೊರರ್ ರೋಲ್ಸ್ ಸಪ್ಲೈ ಮಾಡಿಲ್ಲವೆಂದು ಸರ್ಕಾರಕ್ಕೆ ದೂರು ಬಂದಿಲ್ಲವೆ ?

ಶ್ರೀ ಟಿ. ಚನ್ನಯ್ಯ.—ಇಲ್ಲ, ಬಂದಿಲ್ಲ.

ಶ್ರೀ ಎಸ್. ಗೋಪಾಲಗೌಡ.—ಸಾಮಾನ್ಯವಾಗಿ ಮುನಿಸಿಪಲ್ ಪ್ರದೇಶಗಳಲ್ಲಿ ರಿಟರ್ನಿಂಗ್ ಆಫೀಸರು ಯಾರು ?

ಶ್ರೀ ಟಿ. ಚನ್ನಯ್ಯ.—ಆಯಾ ತಾಲ್ಲೂಕಿನ ಅಮಲ್ದಾರರು.

ಶ್ರೀ ಎಸ್. ಗೋಪಾಲಗೌಡ.—ಇನ್‌ಛಾರ್ಜ್ ಅಮಲ್ದಾರರು ರಿಟರ್ನಿಂಗ್ ಆಫೀಸರ ಕೆಲಸ ಮಾಡ ಬಹುದೆ ?

ಶ್ರೀ ಟಿ. ಚನ್ನಯ್ಯ.—ಅಕ್ಟ್ ಪ್ರಕಾರ ಅವರಿಗೆ ಅಧಿಕಾರವಹಿಸಿದ್ದರೆ ಮಾಡಬಹುದು.

Sri S. GOPALA GOWDA.—My question is whether the in-charge Amildars can exercise the authority of the Returning Officers ?

Mr. SPEAKER.—Under the rules they can ; it is by virtue of office that they hold.

ಶ್ರೀ ಎಸ್. ಗೋಪಾಲಗೌಡ.—ಎರಿಕ್ಟೊರರ್ ರೋಲ್ಸ್ ತಯಾರು ಮಾಡಿರುವುದರಲ್ಲಿ ಅನೇಕ ದೋಷ ದೋಷಗಳಿವೆಯೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಶ್ರೀ ಟಿ. ಚನ್ನಯ್ಯ.—ಅಂಥ ದೋಷದೋಷಗಳೇನೂ ಕಂಡು ಬಂದಿಲ್ಲ.

ಶ್ರೀ ಆರ್. ಅನಂತರಾಮ್.—ಸಿಂಗಲ್ ಮೆಂಬರ್ ಕಾನ್ಸ್ಟಿಟ್ಯೂಯೆನ್ಸಿ ಮಾಡಿರುವುದರಿಂದ ಚುನಾವಣೆಗೆ ತೊಂದರೆಯಾಗಿದೆಯೆಂದು ಅನೇಕ ಕಡೆಗಳಿಂದ ದೂರು ಬಂದಿಲ್ಲವೆ ?

ಶ್ರೀ ಟಿ. ಚನ್ನಯ್ಯ.—ಇಲ್ಲ.

Mr. SPEAKER.—Now we shall take up yesterday's questions about Pay Structure Committee. The following questions pertaining to the subject may be put by Hon'ble Members : Questions Nos. 37, 115, 176, 184, 372, 616, and 601.

Pay Structure Committee Report.

Q.—37. Sri S. SRINIVASA IYENGAR (T.-Narsipur).—

Will the Government be pleased to state :—

(*a*) whether they have received the report of the Pay Structure Committee ;

(*b*) if so, whether they will place the report on the Table of the House ;

(*c*) what action has been taken on the Report ?

A.—Sri K. HANUMANTHAIYA (Chief Minister).—

(*a*) Yes.

(*b*) Yes.

(*c*) The report is under consideration.

Q.—115. Sri G. A. THIMMAPPA GOWDA (Arkalgud).—

Will the Government be pleased to state :—

(*a*) whether the Pay Commission appointed by the Government have submitted their proposals to the Government ; if so, what are they ;

(*b*) the extra financial commitment that they may have to bear, if the proposals of the Commission are implemented ;

(*c*) whether they have accepted some of their proposals ; if so, what are they ?

A.— Sri K. HANUMANTHAIYA (Chief Minister).—

(*a*) and (*b*) Yes ; The report will be placed on the Table of the House.

(*c*) The report is under consideration.

Q.—176. Sri B. P. NAGARAJA MURTHY (Malavalli).—

Will the Government be pleased to state :—

(*a*) whether they have received the final report of the Pay Structure Committee ;

(*b*) the action taken by the Government on the report ?

A.— Sri K. HANUMANTHAIYA (Chief Minister).—

(*a*) Yes.

(*b*) Under consideration.